SEVA BHARATHI
सेवा ही परमो धर्मः

ಸೆಪ್ಟೆಂಬರ್ - 2025
ಸಂಚಿಕೆ - 09
ಸಂಪುಟ - 06

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216




## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ ಮತ್ತು ಸೇವಾಭಾರತಿಯಿಂದ "ಸೇವಾ ಶ್ರೇಷ್ಠ -2025" ಪುರಸ್ಕಾರ:

## ಅರಸಿನಮಕ್ಕಿಯಲ್ಲಿ 102ನೇ ಬೃಹತ್ ರಕ್ತದಾನ ಶಿಬಿರ

## ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯ ಪ್ರಯುಕ್ತ ಮಂಗಳೂರಿನಲ್ಲಿ ಗಾಲಿಕುರ್ಚಿ ಜಾಥಾ

## ನಿಡ್ಲೆಯಲ್ಲಿ ಸಂಪನ್ನಗೊಂಡ 34ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಆತ್ಮಸ್ಥೈರ್ಯದಿಂದ ದಿವ್ಯಾಂಗತೆಯನ್ನು ಮೆಟ್ಟಿನಿಂತ “ಡಾ. ಮುರಳೀಧರ್ ನ್ಯಾಕ್” ವರ್ಕಾಡಿಯವರ ಯಶೋಗಾಥೆ:

ಯಶೋಗಾಥೆ

## ನಮ್ಮಿಂದಿಷ್ಟು

ಸೆಪ್ಟೆಂಬರ್ 05 ರಂದು ಬೆನ್ನುಹುರಿ ಅಪಘಾತ ದಿನಾಚರಣೆ ಮತ್ತು ಈ ತಿಂಗಳ ಪೂರ್ತಿ ಜಾಗೃತಿ ಶಿಬಿರಗಳು, ಜಾಥಾಗಳು, ಅನುಭವಿಗಳಿಂದ ಕಾರ್ಯಾಗಾರ, ಹಾಗೂ ವಿಷಯ ತಜ್ಞರಿಂದ ಆನ್ ಲೈನ್ ಕಾರ್ಯಾಗಳು ನಡೆಯುತ್ತಿವೆ.

ನಿಜವಾಗಿಯೂ ಸರ್ಕಾರಗಳು ಎಚ್ಚೆತ್ತುಕೊಳ್ಳಬೇಕಿದೆ. ಹಾಗೂ ಈ ಒಂದು ದಿವ್ಯಾಂಗತೆಯ ಬಗ್ಗೆ ಗಮನಹರಿಸಿ ಅನೇಕ ಧೀರ್ಘಾವಧಿ ಪರಿಣಾಮಗಳನ್ನುಂಟು ಮಾಡುವಂತಹ ಕಾರ್ಯ- - ಗಳಿಗೆ ಮುನ್ನುಡಿಯಿಡಬೇಕಾಗಿದೆ

ಈ ವರ್ಷವಂತೂ Dr. ಜಯಕುಮಾರ್ ಶೆಟ್ಟಿ ಹಾಗೂ ಬೈಂದೂರಿನ ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ ಯವರು ದಿನಪತ್ರಿಕೆಗಳಲ್ಲಿ ಬರೆದಂತಹ ವಿದ್ಯಮಾನಗಳು ಸ್ವಲ್ಪ ಬೆಳಕು ಚೆಲ್ಲುವಲ್ಲಿ ಯಶಸ್ಸು ಕಂಡಿದೆ. ಆದರೆ ಮತ್ತೆ ಮತ್ತೆ ನಮ್ಮ ಪ್ರಯತ್ನಗಳು ಬೇಕು. ಶಾಸನ ಸಭೆಯಲ್ಲಿ ನಮ್ಮ ಪರವಾಗಿ ಧ್ವನಿ ಎತ್ತುವ ಜನಪ್ರತಿನಿಧಿಗಳನ್ನು ನಾವು ತಯಾರು ಮಾಡಬೇಕಾಗಿದೆ.

ಹೊಸ ಕಾನೂನನ್ನು ರೂಪಿಸುವಂತಾಗಬೇಕು. ಹಾಗೂ ಇರುವಂತಹ ಕಾನೂನುಗಳನ್ನು ಯಥಾವತ್ತಾಗಿ ಜಾರಿಗೊಳಿಸು- - ವಂತೆ ಪ್ರಯತ್ನ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯ ಪ್ರಯತ್ನವಿದೆ. ಅದು ನಿರಂತರ.

ಸೇವಾಧಾಮದಲ್ಲಿ ಸೆಪ್ಟೆಂಬರ್ 05 ರಂದು KMC ಯ ವೈದ್ಯರಾದ Dr. ವೈಶಾಕ್ ಭಟ್ ರವರಿಗೆ ಸಂಸ್ಥೆಯ ವತಿಯಿಂದ, ಅವರು ನಮಗೆ ಕೊಡುತ್ತಿರುವ ಮಹತ್ಕಾರ್ಯಕ್ಕಾಗಿ ಸೇವಾ ಶ್ರೇಷ್ಠ -2025 ಗೌರವ ನೀಡಲಾಗಿದೆ.

ನಿಡ್ಲೆಯಲ್ಲಿ ಟೈಲರಿಂಗ್ ತರಬೇತಿಯ ಸಮಾರೋಪ, ಹಾಗೂ ಹತ್ಯಡ್ಕದಲ್ಲಿ ರಕ್ತದಾನ ಶಿಬಿರಗಳು ಯಶಸ್ಸು ಕಂಡಿದೆ. ಕಟ್ಟಡ ನಿರ್ಮಾಣಕಾರ್ಯವೂ ಮುಂದುವರೆದಿದೆ...

ಈ ಬಾರಿ ನಾವು ಮಂಗಳೂರಿನಲ್ಲಿ ಜಾಥಾ ಮಾಡಿರು - -ವುದು ಅಲ್ಲಿ ಜಾಗೃತಿಗೆ ಕಾರಣವಾಗಿದೆ. ರೋಟರಿ ಸಂಸ್ಥೆಗಳ ಸಹಭಾಗಿತ್ವ ಯಶಸ್ಸಿಗೆ ಕಾರಣ ಎಂಬುವುದು ಉಲ್ಲೇಖನೀಯ ಯೂನಿವರ್ಸಿಟಿ ಕಾಲೇಜಿನ NSS ಕೂಡ ಸಾಥ್ ಕೊಟ್ಟಿರುವುದು ಸಂತೋಷದ ವಿಷಯ.



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ
**ತಮ್ಮವ**
**ಕೆ. ವಿನಾಯಕ ರಾವ್**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 .: 94482 54888**

### ನಮ್ಮ ತಂಡ :

| | | |
|---|---|---|
| ಶ್ರೀಮತಿ ಸ್ವರ್ಣಗೌರಿ | - | ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | - | ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | - | ಖಜಾಂಚಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಟ್ರಸ್ಟಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಟ್ರಸ್ಟಿ |
| ಶ್ರೀ ಪೃಥ್ವಿಶ್ | - | ಟ್ರಸ್ಟಿ |

### ಸಲಹಾ ಮಂಡಳಿ :

**ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್**

**ಡಾ. ಎ. ಜಯಕುಮಾರ್ ಶೆಟ್ಟಿ**

**ಶ್ರೀಮತಿ ಮನೋರಮ ಭಟ್**

**ಶ್ರೀ ವಿಜಯ ಕೊಡವೂರು**

**ಶ್ರೀ ಆದಿತ್ಯ ಕಲ್ಲೂರಾಯ**

**ಶ್ರೀ ಕಿರಣ್ ರಾಜ್ ಕೆ.**

### ಸಂಚಾಲಕರು :

**ಶ್ರೀ ಕೆ. ಪುರಂದರ ರಾವ್**

# ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ ಮತ್ತು ಸೇವಾಭಾರತಿಯಿಂದ "ಸೇವಾ ಶ್ರೇಷ್ಠ - 2025" ಪುರಸ್ಕಾರ:










**ಸೌತಡ್ಕ (ಸೆ. 05):** ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯ ಪ್ರಯುಕ್ತ ಉಚಿತ ವೈದ್ಯಕೀಯ ತಪಾಸಣೆ ಮಾಹಿತಿ ಹಾಗೂ ಮನೋರಂಜನಾ ಕಾರ್ಯಕ್ರಮದ ಉದ್ಘಾಟನ ಸಮಾರಂಭವು ಸಪ್ಟೆಂಬರ್ 05 ರಂದು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದಲ್ಲಿ ನಡೆಯಿತು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಪ್ರಗತಿಪರ ಕೃಷಿಕರಾದ ಶ್ರೀ ಮಾರ್ಷಲ್ ವೇಗಸ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕೊಕ್ಕಡದಲ್ಲಿರುವ ಪುನಶ್ಚೇತನ ಕೇಂದ್ರ ರಾಜ್ಯಕ್ಕೇ ಮಾದರಿಯಾಗಿದೆ. ಸಂಸ್ಥೆಯ ಸೇವಾಕಾರ್ಯಗಳ ನಿರಂತರತೆ ಮತ್ತು ಪಾರದರ್ಶಕತೆಯನ್ನು ಪ್ರಸ್ತಾಪಿಸಿದರು

ಡಾ. ವೈಶಾಖ್ ಬಿ. ಭಟ್ ರವರು ಆರೋಗ್ಯ ಸೇವೆಯಲ್ಲಿ ನೀಡಿದಂತಹ ಸೇವಾಕಾರ್ಯಗಳನ್ನು ಗುರುತಿಸಿ, ಸೇವಾಭಾರತಿ ಸಂಸ್ಥೆಯ ವತಿಯಿಂದ "ಸೇವಾ ಶ್ರೇಷ್ಠ -2025" ಗೌರವವನ್ನು ನೀಡಿ ಸನ್ಮಾನಿಸಲಾಯಿತು. ಬೆನ್ನುಹುರಿ ಅಪಘಾತಕ್ಕೊಳಗಾಗಿರುವ ಶ್ರೀ ಭವಾನಿ ಶಂಕರ್ ರವರು ಹತ್ತಿಯಿಂದ ಬತ್ತಿ ಮಾಡುವ ಯಂತ್ರದ ಮೂಲಕ ಸ್ವ- ಉದ್ಯೋಗವನ್ನು ಮಾಡಲು ಮುಂದಾಗಿದ್ದು ಇವರಿಗೆ ಸಂಸ್ಥೆಯ ವತಿಯಿಂದ ಯಂತ್ರವನ್ನು ಹಸ್ತಾಂತರಿಸಲಾಯಿತು. ಮತ್ತು ಮಂಗಳೂರು KMC ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರಾದ ಡಾ. ವೈಶಾಕ್ ಬಿ ಭಟ್ ರವರಿಂದ ಫಲಾನುಭವಿಗಳಿಗೆ ವೈದ್ಯರ ಸಮಲೋಚನೆಯನ್ನು ಮಾಡಿ ಫಲಾನುಭವಿಗಳಿಗೆ ಮನೋರಂಜನಾ ಕಾರ್ಯಕ್ರಮವನ್ನು ನಡೆಸಲಾಯಿತು..

ಈ ಸಂದರ್ಭದಲ್ಲಿ Dattopant Tengadi Central board for Workers education and development RAC ಮೆಂಬರ್ ಹಾಗೂ ನವಮಂಗಳೂರು ಬಂದರು ಮತ್ತು ಜನರಲ್ ನೌಕರರ ಅಸೋಸಿಯೇಷನ್ BMS ನ ಪ್ರಧಾನ ಕಾರ್ಯದರ್ಶಿ ಶ್ರೀ ವಿಘ್ನೇಶ್ ನಾಯ್ಕ್ ಹಾಗೂ ಫಾರ್ಮರ್ ಪ್ರೆಸಿಡೆಂಟ್ ಎಕ್ಸ್ ಸರ್ವಿಸ್ ಮೆನ್ಸ್ ಅಸೋಸಿಯೇಷನ್ ಬೆಳ್ತಂಗಡಿ (ರಿ.) ಮತ್ತು ಪ್ರಧಾನರು-ಹಿಡಿ ಅಕ್ಕಿಯೋಜನೆ, ಉಜಿರೆ ಹವ್ಯಕ ವಲಯ ಶ್ರೀ ರಾಮಚಂದ್ರಪುರ ಮಠದ ಶ್ರೀ ಎಸ್ ಕೃಷ್ಣ ಭಟ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಕೆ ಕೃಷ್ಣ ಭಟ್, ದಿವ್ಯಂಗಾರ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಕು. ಅಂಜನಾ ದೇವಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯನ್ ಕಾನರ್ಪ ಸ್ವಾಗತಿಸಿ, ಪೀರ್ ಟ್ರೈನರ್ ಶ್ರೀ ಅಂತೋಣಿ ಮತ್ತು ಡಾಕ್ಯುಮೆಂಟೇಶನ್ ಮೋನಿಟರಿಂಗ್ ಅಂಡ್ ಇವ್ಯಾಲುಯೇಶನ್ ಕಾರ್ಡಿನೇಟರ್ ಸುಮ ಕಾರ್ಯಕ್ರಮವನ್ನು ನಿರೂಪಿಸಿ, ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ಧನ್ಯವಾದವಿತ್ತರು.

# ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯ ಪ್ರಯುಕ್ತ ಮಂಗಳೂರಿನಲ್ಲಿ ಗಾಲಿಕುರ್ಚಿ ಜಾಥಾ






**ಮಂಗಳೂರು (ಸೆ. 17)** : ಸೇವಾಭಾರತಿ (ರಿ.), ಕನ್ಯಾಡಿ - ಸೇವಾಧಾಮ ಇದರ ನೇತೃತ್ವದಲ್ಲಿ, ರಾಷ್ಟ್ರೀಯ ಸೇವಾ ಯೋಜನೆ, ರೋಟರಿ ಕ್ಲಬ್ ದೇರಳಕಟ್ಟೆ, ರೋಟರಿ ಕ್ಲಬ್ ಮಂಗಳೂರು ಸಿಟಿ, ರೋಟರಿ ಕ್ಲಬ್ ಮಂಗಳೂರು ಡೌನ್ ಟೌನ್ ಮತ್ತು ರೋಟರಿ ಕ್ಲಬ್ ಮಂಗಳೂರು ಸೌತ್ ಇವುಗಳ ಸಹಭಾಗಿತ್ವದಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ ಹಾಗೂ ಸೇವಾಧಾಮ 8ನೇ ವರ್ಷದ ಪಾದಾರ್ಪಣೆಯ ಸಂದರ್ಭದಲ್ಲಿ ಜನಜಾಗೃತಿಗಾಗಿ ಗಾಲಿಕುರ್ಚಿ ಜಾಥಾವನ್ನು ಸಪ್ಟೆಂಬರ್ 17 ರಂದು ಮಂಗಳೂರಿನಲ್ಲಿ ನಡೆಸಲಾಯಿತು.

ರೋಟರಿ ಜಿಲ್ಲಾ ಗವರ್ನರ್ ಎಲೆಕ್ಟ್ ರೋ| ಸತೀಶ್ ಬೋಳಾರ್ ರವರು ಜಾಥಾಕ್ಕೆ ಹಸಿರು ನಿಶಾನೆಯನ್ನು ತೋರಿಸಿ ಚಾಲನೆಯನ್ನು ನೀಡಿದರು. ಬೆನ್ನುಹುರಿ ಅಪಘಾತದ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವೆನ್ಲಾಕ್ ಜಿಲ್ಲಾ ಆಸ್ಪತ್ರೆಯ ಮುಂಭಾಗದಿಂದ ಆರಂಭಗೊಂಡು, ಕ್ಲಾಕ್ ಟವರ್ ಮುಖಾಂತರ ಸಾಗಿ DHO ಆಫೀಸಿಗೆ ತೆರಳಿ ಸರಕಾರದ ಸೌಲಭ್ಯಕ್ಕಾಗಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಅವರ ವ್ಯಾಪ್ತಿಗೆ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಎಲ್ಲಾ ಸರಕಾರಿ ಆಸ್ಪತ್ರೆಗಳಿಂದ ಸೆಲ್ಫ್ ಕೇರ್ ಮತ್ತು ಮೆಡಿಕಲ್ ಕಿಟ್ ಗಳನ್ನು ಒದಗಿಸಿಕೊಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಹೆಚ್ ಆರ್ ತಿಮ್ಮಯ್ಯ ರವರಿಗೆ ಮನವಿ ಮಾಡಲಾಯಿತು. ನಂತರ ಯೂನಿವರ್ಸಿಟಿ ಕಾಲೇಜಿನ ತನಕ ಜಾಥಾ ನಡೆಸಲಾಯಿತು.

ಒಟ್ಟು 11 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ ಮಂಗಳೂರು ವೆನ್ಲಾಕ್ ಆಸ್ಪತ್ರೆಯ ಜಿಲ್ಲಾ ವೈದ್ಯಾಧಿಕಾರಿಗಳು ಡಾ. ಡಿ ಎಸ್ ಶಿವಪ್ರಕಾಶ್, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವಿಶೇಷ ಚೇತನರ ಸಂಘದ ಅಧ್ಯಕ್ಷರಾದ ಡಾ. ಮುರುಳೀಧರ್ ನಾಯಕ್, ನಿಕಟಪೂರ್ವ ಜಿಲ್ಲಾ ಗವರ್ನರ್, ರೋಟರಿ ಜಿಲ್ಲೆ 3181 ರೋ। ವಿಕ್ರಮ್ ದತ್ತ, ಸಹಾಯಕ ಗವರ್ನರ್ ರೋ| ಡಾ. ರವಿಶಂಕರ ರಾವ್, ರತ್ನ ಎಜ್ಯುಕೇಶನ್ ಟ್ರಸ್ಟ್(ರಿ.),ದೇರಳಕಟ್ಟೆಯ ಅಧ್ಯಕ್ಷರಾದ ಶ್ರೀ ಕೆ ರವೀಂದ್ರ ಶೆಟ್ಟಿ ಉಳಿದೊಟ್ಟು, ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸಹಯೋಗಿ ರೋಟರಿ ಕ್ಲಬ್ ಗಳ ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಸೇವಾಭಾರತಿ ಸಿಬ್ಬಂದಿವರ್ಗ ಹಾಗೂ ಮಂಗಳೂರು ಯೂನಿವರ್ಸಿಟಿಯ ಎನ್ಎಸ್ಎಸ್ ಘಟಕದ ವಿದ್ಯಾರ್ಥಿಗಳು ಸೇರಿದಂತೆ 150 ಮಂದಿ ಜಾಥಾದಲ್ಲಿ ಭಾಗವಹಿಸಿದ್ದರು.

## "Yes to access" ಅಭಿಯಾನದ ಬಗ್ಗೆ ಅರಿವು.



**ಸೌತಡ್ಕ(ಸೆ.16):** ಕನ್ಯಾಡಿ ಸೇವಾಭಾರತಿ ಸಂಸ್ಥೆಯು ಮಂಗಳೂರಿನಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಬ್ಯಾಂಕ್ ಕಟ್ಟಡಕ್ಕೆ ಸೆಪ್ಟೆಂಬರ್ 16 ರಂದು ಭೇಟಿ ನೀಡಿ ಸುಮಾರು **104 ಕಟ್ಟಡಗಳಿಗೆ "yes to access"** ಅಭಿಯಾನದ ಬಗ್ಗೆ ಅರಿವು ಮೂಡಿಸಿ ಅನುಷ್ಠಾನಗೊಳಿಸುವಂತೆ ಮಾಹಿತಿಯನ್ನು ನೀಡಲಾಯಿತು.

**"Yes to access"** ಈ ಒಂದು ವೆಬ್ಸೈಟ್ ಭಾರತ ಸರ್ಕಾರದ ಅಂಗವಿಕಲ ಸಬಲೀಕರಣ ಇಲಾಖೆ 2015 ರಲ್ಲಿ ಪ್ರಾರಂಭಿಸಿದ ಅಭಿಯಾನವಾಗಿದೆ, ದಿವ್ಯಾಂಗರಿಗೆ ಭಾರತದ ಎಲ್ಲಾ ಸರ್ಕಾರಿ ಕಟ್ಟಡಗಳಿಗೆ ಪ್ರವೇಶವನ್ನು ಮಾಡಲು ಆಕ್ಸಿಸೆಬಲ್ ದೊರಕಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

**"Yes to access"** ಆಪ್ ನ ಮುಖಾಂತರ ಕಟ್ಟಡದ ಭಾವಚಿತ್ರವನ್ನು ಅಪ್ಲೋಡ್ ಮಾಡಿ ಅಲ್ಲಿ ನಿರ್ಮಿಸಲಾದ ಮೆಟ್ಟಿಲುಗಳ ಎತ್ತರ ರ್ಯಾಂಪ್ ನ ಇಳಿಜಾರು ಮತ್ತು ಬಾಗಿಲುಗಳ ಅಗಲ ಹಾಗೂ ಶೌಚಾಲಯದ ಬಗ್ಗೆ ನಿಖರವಾದ ಮಾಹಿತಿಯನ್ನು ಫೋಟೋ ಮೂಲಕ ಅಪ್ಲೋಡ್ ಮಾಡುವುದಾಗಿದೆ. ಇದರಿಂದ ದಿವ್ಯಾಂಗರಿಗೆ ಅಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ರೀತಿ ಅಭಿವೃದ್ಧಿ ಆಗಿದಲ್ಲಿ ದಿವ್ಯಾಂಗರಿಗೆ ಎಲ್ಲ ಕಟ್ಟಡಕ್ಕೂ ಪ್ರವೇಶವನ್ನು ಮಾಡಲು ಅನುಕೂಲವಾಗುತ್ತದೆ..

# ಅರಸಿನಮಕ್ಕಿಯಲ್ಲಿ ಬೃಹತ್ ರಕ್ತದಾನ ಶಿಬಿರ






**ಅರಸಿನಮಕ್ಕಿ (ಸೆ. 14):** ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.),ಅರಸಿನಮಕ್ಕಿ ಇದರ ನೇತೃತ್ವದಲ್ಲಿ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಮಂಗಳೂರು, ಲೇಡಿಗೋಶನ್ ಆಸ್ಪತ್ರೆ ಇವುಗಳ ಸಹಯೋಗದಲ್ಲಿ ಹಾಗೂ ಸೇವಾಭಾರತಿ (ರಿ.), ಕನ್ಯಾಡಿ ಇದರ ಆರೋಗ್ಯಂ ಯೋಜನೆಯಡಿ 102ನೇ ಶಿಬಿರ ಸಂಯೋಜನೆ ಸೆಪ್ಟೆಂಬರ್ 14 ರಂದು ಬೃಹತ್ ರಕ್ತದಾನ ಶಿಬಿರವು ಅರಸಿನಮಕ್ಕಿಯ ಹತ್ಯಡ್ಕ ಸಿ. ಎ. ಬ್ಯಾಂಕ್ ಸಭಾಂಗಣದಲ್ಲಿ ಜರುಗಿತು.

ಶ್ರೀ ಗುಡ್ರಾಮಲೇಶ್ವರ ದೇವಸ್ಥಾನ ಗುಡ್ರಾಧಿ ಇದರ ಅಧ್ಯಕ್ಷರಾದ ಶ್ರೀ ಮಂಜುನಾಥ ಗೌಡ ಕೈಕುರೆ ಉದ್ಘಾಟಿಸಿ, ಶಿಬಿರಕ್ಕೆ ಶುಭ ಹಾರೈಸಿದರು. ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ(ನಿ.), ಅರಸಿನಮಕ್ಕಿ ಅಧ್ಯಕ್ಷರಾದ ಶ್ರೀ ರಾಘವೇಂದ್ರ ನಾಯಕ್ ಬರ್ಗುಳ ಅಧ್ಯಕ್ಷತೆ ವಹಿಸಿ, ರಕ್ತದಾನ ಮಾಡುವುದರಿಂದ ನಮ್ಮ ಆರೋಗ್ಯ ಕಾಪಾಡುವಲ್ಲಿ ಹೆಚ್ಚಿನ ಮಹತ್ವ ನೀಡಿದಂತಾಗುತ್ತದೆ ಹಾಗೂ ಈ ಭಾಗದ ಜನರಿಗೆ ತುರ್ತು ರಕ್ತದ ಅಗತ್ಯವಿದ್ದಲ್ಲಿ, ರಕ್ತದ ಅವಶ್ಯಕತೆಯನ್ನು ಪೂರೈಸಲು ಹೆಲ್ಪ್ ಲೈನ್ ನಂಬರ್ ನೀಡುವುದಾಗಿ ತಿಳಿಸಿದರು. ಸೇವಾಧಾಮ ಸಂಸ್ಥಾಪಕ ಹಾಗೂ ಸೇವಾಭಾರತಿ (ರಿ.) ಕನ್ಯಾಡಿಯ ಖಜಾಂಚಿ ಕೆ. ವಿನಾಯಕ ರಾವ್, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷರಾದ ರೊ। ಪ್ರೊ. ಟಿ. ಪ್ರಕಾಶ್ ಪ್ರಭು, ಅರಸಿನಮಕ್ಕಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಸುಧೀರ್ ಕುಮಾರ್ ಎಂ. ಎಸ್, ಎಲ್ ಐ ಸಿ ಆಫ್ ಇಂಡಿಯಾ ಡೆವಲಪ್ಮೆಂಟ್ ಆಫೀಸರ್ ಶ್ರೀ ಉದಯ ಶಂಕರ್, ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.), ಅರಸಿನಮಕ್ಕಿ ಉಪಾಧ್ಯಕ್ಷರಾದ ಶ್ರೀ ರಾಜು ಕೆ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಮಂಗಳೂರು ರಕ್ತ ನಿಧಿ ವಿಭಾಗದ ಜಿಲ್ಲಾ ಸಂಯೋಜಕರಾದ ಪ್ರವೀಣ್ ಕುಮಾರ್, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವಿಚಂದ್ರ ರಾವ್ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದ ಯಶಸ್ಸಿಗೆ ರೋಟರಿ ಕ್ಲಬ್ ಬೆಳ್ತಂಗಡಿ, ಶೌರ್ಯ ವಿಪತ್ತು ನಿರ್ವಹಣಾ ಘಟಕ ಶಿಶಿಲ-ಅರಸಿನಮಕ್ಕಿ, ನವಶಕ್ತಿ ರಿಕ್ಷಾ ಚಾಲಕ ಮಾಲಕರ ಸಂಘ ಅರಸಿನಮಕ್ಕಿ, ಚೈತನ್ಯ ಮಿತ್ರ ಕಲಾವೃಂದ ಅರಸಿನಮಕ್ಕಿ, ಹಾಲು ಉತ್ಪಾದಕರ ಸಹಕಾರಿ ಸಂಘ ಅರಸಿನಮಕ್ಕಿ, ಅಶ್ವಮೇಧ ಫ್ರೆಂಡ್ಸ್ ಅರಸಿನಮಕ್ಕಿ, ಗ್ರಾಮ ಪಂಚಾಯತ್ ಅರಸಿನಮಕ್ಕಿ, ಶ್ರೀ.ಕ್ಷೇ.ಧ. ಗ್ರಾ. ಯೋಜನೆ ಅರಸಿನಮಕ್ಕಿ ವಲಯ, ವನದುರ್ಗಾ ಗೆಳೆಯರ ಬಳಗ ಅರಿಕೆಗುಡ್ಡೆ ಹತ್ಯಡ್ಕ, ಕಾಪು ಉಳ್ಳಾಲ್ತಿ ಗೆಳೆಯರ ಬಳಗ, ಉಪ್ಪರಡ್ಕ, ಸ್ವಸ್ತಿಕ್ ಫ್ರೆಂಡ್ಸ್ ಬೂಡ್ತಮಕ್ಕಿ, ಕಪಿಲ ಕೇಸರಿ ಗೆಳೆಯರ ಬಳಗ ಕುಂಟಾಲಪಳಿಕೆ, ಗ್ರಾಮ ಪಂಚಾಯತ್ ಶಿಶಿಲ, ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲ ವೈಕುಂಠಪುರ ಶಿಶಿಲ, ಹಾಲು ಉತ್ಪಾದಕರ ಸಹಕಾರಿ ಸಂಘ ಶಿಶಿಲ, ಹಿಂದೂ ಜಾಗರಣಾ ವೇದಿಕೆ ಶಿಶಿಲ, ಬ್ರಹ್ಮಶ್ರೀ ಫ್ರೆಂಡ್ಸ್ ಒಟ್ಲ ಶಿಶಿಲ, ದೇನೋಡಿ ಗೆಳೆಯರ ಬಳಗ ಶಿಶಿಲ, ಆಟೋ ಚಾಲಕ ಮಾಲಕರ ಸಂಘ ಶಿಶಿಲ, ಜೈ ಶ್ರೀರಾಮ್ ಗೆಳೆಯರ ಬಳಗ ಶಿಬಾಜೆ, ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿ ಪೆರ್ಲ, ವಿಶ್ವ ಹಿಂದೂ ಪರಿಷತ್ ಭಜರಂಗದಳ ರೆಖ್ಯ, ಹಾಲು ಉತ್ಪಾದಕರ ಸಹಕಾರಿ ಸಂಘ ರೆಖ್ಯ ಗ್ರಾಮ ಪಂಚಾಯತ್ ಶಿಬಾಜೆ ಸಹಕರಿಸಿದ್ದಾರೆ.

ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರಾದ ಶ್ರೀ ವರದ ಶಂಕರ್ ನಿರೂಪಿಸಿ, ನಿರ್ದೇಶಕರಾದ ಶ್ರೀ ಬೇಬಿ ಕಿರಣ್ ಕಾರ್ಯಕ್ರಮವನ್ನು ಸ್ವಾಗತಿಸಿ, ನಿರ್ದೇಶಕರಾದ ಶ್ರೀ ರತೀಶ್ ಬಿ ಧನ್ಯವಾದವಿತ್ತರು. ಶಿಬಿರದಲ್ಲಿ ಒಟ್ಟು 53 ಯೂನಿಟ್ಸ್ ರಕ್ತವನ್ನು ಸಂಗ್ರಹಿಸಲಾಯಿತು.




## ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರಕ್ಕೆ ಶ್ರೀ ಶ್ರೀನಿವಾಸ್ ಪೂಜಾರಿ ಮೆಲ್ಕಾರ್ ರವರಿಂದ ರೂ.10,000 ದೇಣಿಗೆ :

**ಸೌತಡ್ಕ (ಸೆ. 16):** ಬಂಟ್ವಾಳ ತಾಲೂಕಿನ ಶ್ರೀ ಶ್ರೀನಿವಾಸ್ ಪೂಜಾರಿ ಮೆಲ್ಕಾರ್ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಕಟ್ಟಡದ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು. ಸಂಸ್ಥೆಯ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು..

# ನಿಡ್ಲೆಯಲ್ಲಿ ಸಂಪನ್ನಗೊಂಡ 34ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ



**ನಿಡ್ಲೆ (ಸೆ. 20)**: ಸೇವಾಭಾರತಿ(ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.),ನಿಡ್ಲೆ, ಗ್ರಾಮ ಪಂಚಾಯತ್, ನಿಡ್ಲೆ ಮತ್ತು ಪ್ರೇರಣಾ ಸಂಜೀವಿನಿ ಮಹಿಳಾ ಒಕ್ಕೂಟ, ನಿಡ್ಲೆ ಇದರ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 34ನೇ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಸೆಪ್ಟೆಂಬರ್ 20 ರಂದು ನಿಡ್ಲೆಯಲ್ಲಿ ನಡೆಯಿತು.

ನಿಡ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.), ಅಧ್ಯಕ್ಷರಾದ ಶ್ರೀ ಧನಂಜಯ ಗೌಡ ರವರು ಮಾತನಾಡಿ ಈ ತರಬೇತಿ ಶಿಬಿರವು ಸ್ವ-ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು. ಟೈಲರಿಂಗ್ ಕಲಿಯುವುದರಿಂದ ಬೇರೆ - ಬೇರೆ ರೀತಿಯ ಸ್ವ - ಉದ್ಯೋಗದ ಅವಕಾಶವಿರುತ್ತದೆ. ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕನ್ಯಾಡಿ ಸೇವಾಭಾರತಿ(ರಿ.),ಸಲಹಾ ಮಂಡಳಿ ಸದಸ್ಯರು ಮತ್ತು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ| ಎ. ಜಯಕುಮಾರ್ ಶೆಟ್ಟಿ ಯವರು ಮಹಿಳೆಯರು ಸ್ವಾವಲಂಬಿ ಜೀವನವನ್ನು ಮಾಡುತ್ತ ಮುನ್ನಡೆಯುವುದು ಅತ್ಯಗತ್ಯ.. ಯಾವುದೇ ಒಂದು ಕೆಲಸ ಮಾಡಬೇಕಾದರೂ ಅದಕ್ಕೆ ಆಸಕ್ತಿ ಬಹಳ ಮುಖ್ಯವಾಗುತ್ತದೆ.. ಯಾವುದು ನಮ್ಮಿಂದ ಸಾಧ್ಯವಿಲ್ಲ ಅಂದುಕೊಳ್ಳಬಾರದು ಎಲ್ಲವೂ ನಮ್ಮಿಂದ ಸಾಧ್ಯ ಎಂದರೆ ಅದಕ್ಕೆ ತಕ್ಕ ಪ್ರತಿಫಲ ದೊರಕಿಯೇ ದೊರಕುತ್ತದೆ ಎಂದು ಪ್ರೇರಣಾದಾಯಕ ಮಾತುಗಳಾಡಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ರಜನಿ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ನಮ್ಮ ಸಂಸ್ಥೆಯ ಪರವಾಗಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು ಮತ್ತು ನಿಡ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರು ಶ್ರೀಮತಿ ರಜನಿರವರಿಗೆ ಗೌರವಧನವನ್ನು ನೀಡಿ ಸಹಕರಿಸಿದ್ದು ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಪೂರ್ಣಿಮಾ, ನಿಡ್ಲೆ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶ್ಯಾಮಲಾ, ಬೆಳ್ತಂಗಡಿ ಸಂಜೀವಿನಿ ಮಹಿಳಾ ಒಕ್ಕೂಟ, ಕೃಷಿಯೇತರ ಚಟುವಟಿಕೆಗಳ Block Manager ಶ್ರೀ ನಿತೀಶ್, ಬೆಳ್ತಂಗಡಿ ಸಂಜೀವಿನಿ ಮಹಿಳಾ ಒಕ್ಕೂಟದ ವಲಯ ಮೇಲ್ವಿಚಾರಕರು ಶ್ರೀಮತಿ ವೀಣಾಶ್ರೀ, ನಿಡ್ಲೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ದಿನೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 30 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಮತಿ ಸುಮನ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕಾರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ಹೇಮಾವತಿ ಧನ್ಯವಾದವಿತ್ತರು.

# ಪ್ರಾಂತ ಸೇವಾಭಾರತಿಯಿಂದ ಸೇವಾಧಾಮ ಭೇಟಿ.




**ಸೌತಡ್ಕ (ಸೆ. 18)** ಸೇವಾಭಾರತಿ ಕರ್ನಾಟಕ ದಕ್ಷಿಣ ಪ್ರಾಂತ ಸಂಘಟನಾ ಮಂತ್ರಿ ಶ್ರೀಯುತ ಸುರೇಶ್ ಹಾಗೂ ಸೇವಾಭಾರತಿ ಮಂಗಳೂರು ವಿಭಾಗ ಸಂಘಟನಾ ಮಂತ್ರಿ ಶ್ರೀಯುತ ಚಂದ್ರಶೇಖರರವರು ಕನ್ಯಾಡಿ ಸೇವಾನಿಕೇತನ ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಸೆಪ್ಟೆಂಬರ್ 17 ರಂದು ಭೇಟಿ ನೀಡಿದರು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ಧರ್ಮಸ್ಥಳ ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 20,000/- ದೇಣಿಗೆ.



**ಧರ್ಮಸ್ಥಳ (ಸೆ .25) :** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಧರ್ಮಸ್ಥಳ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 50 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 20,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಶಶಿಧರ್ ರವರು ಸೇವಾಭಾರತಿ ಅನುಸರಣೆ ಹಾಗೂ ಹಣಕಾಸು ವ್ಯವಸ್ಥಾಪಕ ಮೋಹನ್ ಎಸ್ ಹಾಗೂ ದಕ್ಷಿಣ ಕನ್ನಡ ಹಾಗೂ ಕೊಡಗು ಕ್ಷೇತ್ರ ಸಂಯೋಜಕರಾದ ಕುಸುಮಾಧರ್ ರವರಿಗೆ ದೇಣಿಗೆಯನ್ನು ಹಸ್ತಾಂತರಿಸಿದರು. ಸಂಸ್ಥೆಯ ಪರವಾಗಿ ಧನ್ಯವಾದ ಸಲ್ಲಿಸಲಾಯಿತು.

## ಕೊಯ್ಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.



**ಕೊಯ್ಯೂರು (ಸೆ. 08):** ಕೊಯ್ಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಿಸುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಸಿಬ್ಬಂದಿ ಶ್ರೀಮತಿ ಮಮತಾ ರೈ ರವರು ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ರವರಿಗೆ ಚೆಕ್ ಹಸ್ತಾಂತರಿಸಿದರು..

# ಸೇವಾನಿಕೇತನಕ್ಕೆ ಬೈಂದೂರು ಶಾಸಕರ ಭೇಟಿ.



**ಕನ್ಯಾಡಿ (ಸೆ. 01):** ಬೈಂದೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಗುರುರಾಜ್ ಗಂಟಿಹೊಳೆಯವರು ಸೆಪ್ಟೆಂಬರ್ 01 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿದರು. ಶಾಸಕರ ನೇತೃತ್ವದಲ್ಲಿ ಸಮೃದ್ಧ ಬೈಂದೂರು ಯೋಜನೆಯಡಿಯಲ್ಲಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದ ಹೇನಬೇರು ಶಾಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡ "ಸೇವಾಧಾಮದ" ಬಗ್ಗೆ ಮಾಹಿತಿ ವಿನಿಮಯ ಮಾಡಲಾಯಿತು ಹಾಗೂ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣದ ಕಾರ್ಯವನ್ನು ವೀಕ್ಷಿಸಿ ಕಟ್ಟಡ ನಿರ್ಮಾಣ ಶೀಘ್ರವಾಗಿ ನೆರವೇರುವಂತೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ವಿಜಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ(ನಿ.)ಗುರುವಾಯನಕೆರೆಯಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ. 15,000/- ದೇಣಿಗೆ.




**ಗುರುವಾಯನಕೆರೆ (ಸೆ. 01):** ವಿಜಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ(ನಿ) ಇಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 38 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 15,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಅಧ್ಯಕ್ಷರು ಶ್ರೀ ಅಜಿತ್ ಜಿ ಶೆಟ್ಟಿ ಹಾಗೂ ಸಂಘದ ಕಾರ್ಯನಿರ್ವಹಣಾಧಿಕಾರಿ ಶ್ರೀ ಸುಜಯ್ ಶೆಟ್ಟಿ ರವರು ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ರವರಿಗೆ ಚೆಕ್ ಹಸ್ತಾಂತರಿಸಿದರು.

## ಮಂಗಳೂರು ಇಂಪೀರಿಯಾ ಕಾರ್ಪೊರೇಷನ್ ಸಿಇಓ ಸೇವಾನಿಕೇತನಕ್ಕೆ ಭೇಟಿ



**ಕನ್ಯಾಡಿ (ಸೆ. 07):** ಮಂಗಳೂರು ಇಂಪೀರಿಯಾ ಕಾರ್ಪೊರೇಷನ್ ಸಿಇಓ ನಿಶಾನ್ ಕೃಷ್ಣ ಭಂಡಾರಿಯವರು ಕನ್ಯಾಡಿ ಸೇವಾನಿಕೇತನಕ್ಕೆ ಸೆಪ್ಟೆಂಬರ್ 07 ರಂದು ಭೇಟಿ ನೀಡಿದರು. ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸೇವಾಧಾಮ ಮಾಡುವ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಸಹಕರಿಸುವಂತೆ ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಗೋವರ್ಧನ ಗಿರಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿಯ ಸಿಇಓ ಪ್ರೀತೇಶ್ ಮಂಗಳೂರು, ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲಿಯಾನ್ ಕಾನರ್ಪ ಉಪಸ್ಥಿತರಿದ್ದರು.

## ಹತ್ತಿ ಯಿಂದ ಬತ್ತಿ ಮಾಡುವ ಯಂತ್ರ ಹಸ್ತಾಂತರ




**ಸೌತಡ್ಕ (ಸೆ. 05):** ಬಂಟ್ವಾಳ ತಾಲೂಕಿನ ಕೊಲ್ಲೂರು ಗ್ರಾಮದ ಶ್ರೀ ಭವಾನಿಶಂಕರ್ ಟಿ ಕೆ ರವರು 3 ಫೆಬ್ರವರಿ 2016 ರಂದು ರಸ್ತೆ ಅಪಘಾತದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾಗಿರುತ್ತಾರೆ. ಮೂರು ವರ್ಷಗಳ ಕಾಲ ಹಾಸಿಗೆಯಲ್ಲಿ ಮಲಗಿ ದಿನವನ್ನು ಕಳೆದ ವ್ಯಕ್ತಿ ನಂತರ ಒಂದು ತಿಂಗಳ ಕಾಲ ಸೌತಡ್ಕದ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವಷ್ಟು ಸಬಲರಾಗಿದ್ದಾರೆ. ಹತ್ತಿಯಿಂದ ಬತ್ತಿ ಮಾಡುವ ಯಂತ್ರದ ಮೂಲಕ ಸ್ವ- ಉದ್ಯೋಗವನ್ನು ಮಾಡುತ್ತ ಜೀವನವನ್ನು ರೂಪಿಸಿಕೊಳ್ಳಲು ಮುಂದಾಗಿದ್ದು ಈ ನಿಟ್ಟಿನಲ್ಲಿ ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯ ಪ್ರಯುಕ್ತ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೌತಡ್ಕದಲ್ಲಿ ಸಂಸ್ಥೆಯ ಪರವಾಗಿ ಹತ್ತಿಯಿಂದ ಬತ್ತಿ ಮಾಡುವ ಯಂತ್ರವನ್ನು ಹಸ್ತಾಂತರಿಸಲಾಯಿತು.

## ಬೆಳ್ತಂಗಡಿಯ ತ್ರಿವಿಕ್ರಮ್ ಹೆಬ್ಬಾರ್ ರವರಿಂದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.




**ಕನ್ಯಾಡಿ (ಸೆ. 16):** ಬೆಳ್ತಂಗಡಿ ರೋಟರಿ ಕ್ಲಬ್ ನ ಸದಸ್ಯರಾದ ರೊ|ತ್ರಿವಿಕ್ರಮ್ ಹೆಬ್ಬಾರ್ ಕನ್ಯಾಡಿ ಸೇವಾನಿಕೇತನಕ್ಕೆ ಸಪ್ಟೆಂಬರ್ 16 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ, ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು. ಈ ಸಂದರ್ಭದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್ ನ ಅಧ್ಯಕ್ಷರಾದ ರೊ| ಪ್ರೋ. ಟಿ ಪ್ರಕಾಶ್ ಪ್ರಭು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

## ಮೂಡಿಗೆರೆಯ ಪದ್ಮಲತಾ ರವರಿಂದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.



**ಸೌತಡ್ಕ (ಸೆ. 21):** ಮೂಡಿಗೆರೆಯ ಶ್ರೀಮತಿ ಪದ್ಮಲತಾ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಸೆಪ್ಟೆಂಬರ್ 21 ರಂದು ಭೇಟಿ ನೀಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಗೌರಿ ಮತ್ತು ಸೇವಾಧಾಮದ ಪೀರ್ ಟ್ರೈನರ್ ಶ್ರೀ ಅಂತೋನಿ ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಗುರುವಾಯನಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.),ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.



**ಗುರುವಾಯನಕೆರೆ (ಸೆ. 26):** ಗುರುವಾಯನಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ದಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ರವಿಕಲಾ ಎನ್ ರವರು ಸೇವಾಭಾರತಿ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ ರವರಿಗೆ ಚೆಕ್ ಹಸ್ತಾಂತರಿಸಿದರು.

## ಕನ್ಯಾಡಿ ಸೇವಾಭಾರತಿಯಿಂದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರ ಭೇಟಿ:



**ಬೆಂಗಳೂರು (ಸೆ. 24)** ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ಮತ್ತು ಬಿಜೆಪಿ ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ತೇಜಸ್ವಿ ಸೂರ್ಯ ರವರನ್ನು ಸೆಪ್ಟೆಂಬರ್ 24 ರಂದು ಭೇಟಿ ಮಾಡಿ ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ CSR ಅನುದಾನವನ್ನು ಒದಗಿಸಿಕೊಡುವಂತೆ ಮನವಿ ಮಾಡಲಾಯಿತು. ಸಂಸದರು ಸಹಕರಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಮತ್ತು ಸ್ವಯಂಸೇವಕರಾದ ಶ್ರೀ ಜಯರಾಜ್ ಉಪಸ್ಥಿತರಿದ್ದರು.

## ಮಡಂತ್ಯಾರು ಪ್ರಾ. ಕೃ.ಸ. ಸಂಘ(ನಿ.),ದಿಂದ ಸೇವಾಧಾಮ ಪುನಶ್ಚೇತನ ಕೇಂದ್ರ ನಿರ್ಮಾಣಕ್ಕಾಗಿ ರೂ.10,000/- ದೇಣಿಗೆ.



**ಮಡಂತ್ಯಾರು (ಸೆ. 26):** ಮಡಂತ್ಯಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ದಿಂದ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ 25 ಬ್ಯಾಗ್ ಸಿಮೆಂಟ್ ನ ಬಾಬ್ತು ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಅಧ್ಯಕ್ಷರಾದ ಶ್ರೀ ಜೋಯಲ್ ಗಾಡ್ ಫ್ರೀ ಮೆಂಡೋನ್ಸಾ, ಉಪಾಧ್ಯಕ್ಷರಾದ ಕಾಂತಪ್ಪ ಗೌಡ ಎಚ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಜೋಕಿಂ ಡಿ'ಸೋಜ ರವರು ಸೇವಾಭಾರತಿ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ಹಾಗೂ ಉಡುಪಿ ಜಿಲ್ಲಾ ಕ್ಷೇತ್ರ ಸಂಯೋಜಕರಾದ ಮನೋಜ್ ಜೆ. ಶೆಟ್ಟಿರವರಿಗೆ ಚೆಕ್ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳು ಉಪಸಿತರಿದ್ದರು.

## ಮಂಗಳೂರು ಶ್ರೀಶಾ ಸೌಹಾರ್ದ ಕೋ- ಆಪರೇಟಿವ್ ಸೊಸೈಟಿಯಿಂದ ಸೇವಾಧಾಮದ ಫಲಾನುಭವಿಗಳಿಗೆ ಕಮೊಡ್ ಗಾಲಿಕುರ್ಚಿ ಹಸ್ತಾಂತರ.



**ಮಂಗಳೂರು(ಸೆ. 28)** ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೊಂಡು 25 ಸಂವತ್ಸರಗಳಾದ ಹಿನ್ನೆಲೆಯಲ್ಲಿ ಶ್ರೀಶಾ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ವತಿಯಿಂದ ಸೆಪ್ಟೆಂಬರ್ 28 ರಂದು ಮಂಗಳೂರಿನ ಮಂಗಳಾದೇವಿ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಆರ್ಥಿಕವಾಗಿ ಹಿಂದುಳಿದ 25 ಅರ್ಹ ಫಲಾನುಭವಿಗಳಿಗೆ ವೀಲ್ ಚೇರ್ ಗಳ ವಿತರಣೆಯನ್ನು ಮಾಡಲಾಯಿತು.


ಈ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ 2 ಕಮೊಡ್ ಗಾಲಿಕುರ್ಚಿ ಮತ್ತು ಸೇವಾಧಾಮದ ಫಲಾನುಭವಿಗಳಾದ ಬಂಟ್ವಾಳದ ಶ್ರೀ ಮೊಹಮ್ಮದ್ ಫಾರೂಕ್, ಶ್ರೀ ಯಾದವ ಕುಲಾಲು, ಶ್ರೀ ಪರಮೇಶ್ವರ್ ವಿಟ್ಲ, ಶ್ರೀ ರವೀಂದ್ರ ನಾಯ್ಕ, ಪುತ್ತೂರಿನ ಶ್ರೀ ಧನಂಜಯ, ಬೆಳ್ತಂಗಡಿಯ ಉಮೇಶ ಬಿ, ಮಂಗಳೂರಿನ ಅಶ್ರಫ್ ಮತ್ತು ಕು. ವೇದಾವತಿ ಗಂಜಿಮಠ ರವರಿಗೆ ಸೇರಿ ಒಟ್ಟು 10 ಕಮೊಡ್ ಗಾಲಿಕುರ್ಚಿಗಳನ್ನು ಸೊಸೈಟಿಯ ಪದಾಧಿಕಾರಿಗಳು ಹಸ್ತಾಂತರಿಸಿದ್ದಾರೆ. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಆರೈಕೆದಾರರು ಮತ್ತು ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 10,000/- ದೇಣಿಗೆ



**ಸೌತಡ್ಕ (ಸೆ 30):** ಬೆಂಗಳೂರಿನ ಶ್ರೀ ತುಕಾರಾಮ ಹಾಗೂ ಶ್ರೀಮತಿ ಕವಿತಾ ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ರೂ.10,000/- ದೇಣಿಗೆಯನ್ನು ನೀಡಿದ್ದಾರೆ. ಸಂಸ್ಥೆಯ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು

## ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 10,000/- ದೇಣಿಗೆ



**ಮಂಗಳೂರು (ಸೆ 30):** ಶ್ರೀ ಭಾಸ್ಕರ್ ಶೆಟ್ಟಿ ರವರ ಸ್ಮರಣಾರ್ಥವಾಗಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದ ಹೇನಬೇರು ಶಾಲೆಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರದ ಉದ್ದೇಶಿತ ಕಟ್ಟಡ "ಸೇವಾಧಾಮಕ್ಕೆ ಶ್ರೀಮತಿ ರೇವತಿ ಶೆಟ್ಟಿ (ಪತ್ನಿ) ಮತ್ತು ಶ್ರೀ ಪ್ರಶಾಂತ್ ಶೆಟ್ಟಿ (ಪುತ್ರ)ರವರು 1,06,000/- ವೆಚ್ಚದ ನಿಯೋಬೋಲ್ಟ್ ನೀಡಿ ಸಹಕರಿಸಿದ್ದಾರೆ.

ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಮತ್ತು ಸರ್ವಿಸ್ ಕಾರ್ಡಿನೇಟರ್ ಶ್ರೀ ವಿರೂಪಾಕ್ಷಿ ನಿಯೋಬೋಲ್ಟ್ ಅನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ:

ಜೀವನ್ ವಿನೋದ್ ಡಿಸೋಜಾ ಆದ ನಾನು ಮಂಗಳೂರು ತಾಲೂಕು ಪರಂಗಿಪೇಟೆಯಲ್ಲಿ ವಾಸವಾಗಿರುತ್ತೇನೆ. 16/12/2024 ತೆಂಗಿನಕಾಯಿ ಕೀಳುವ ಕೆಲಸಕ್ಕೆ ಹೋಗಿರುವಾಗ ಮರದಿಂದ ಬಿದ್ದಿರುತ್ತೇನೆ. ನನ್ನನ್ನು ಫಸ್ಟ್ ನ್ಯೂರೋ ಹಾಸ್ಪಿಟಲ್ ಗೆ ಸೇರಿಸಿ ಹೆಚ್ಚಿನ ಚಿಕಿತ್ಸೆಗಾಗಿ ನಂತರ ತೇಜಸ್ವಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ನಂತರ 27/1/2025 ರಂದು ಸೇವಾಧಾಮಕ್ಕೆ ಕರೆದುಕೊಂಡು ಬಂದರು ನಂತರ 12 ದಿವಸ ಬ್ಲಡ್ ಇನ್ಫೆಕ್ಷನ್ ನಿಂದ ರೂಮಿನಲ್ಲಿ ಇದ್ದು ನಂತರ ನನಗೆ ಫಿಸಿಯೋಥೆರಪಿ ಮಾಡಿಸಿದರು.. ಸೇವಾಧಾಮಕ್ಕೆ ಬರುವಾಗ ನಾನು ಮಲಗಿಕೊಂಡು ಅಂಬುಲೆನ್ಸ್ ನಲ್ಲಿ ಬಂದಿದ್ದೆ ನನಗೆ ಹಾಸಿಗೆಯಿಂದ ಏಳಲು ಆಗುತ್ತಿರಲಿಲ್ಲ.. ನಂತರ ವಿರೂಪಾಕ್ಷ ಸರ್ ಮತ್ತು ಅಂತೋಣಿ ಸರ್ ಶಿಫ್ಟ್ ಆಗಲು ಕಲಿಸಿಕೊಟ್ಟಿದ್ದಾರೆ. ಮತ್ತು ಎಲ್ಲ ರೀತಿಯ ವ್ಯಾಯಾಮ ಕಲಿಸಿಕೊಟ್ಟಿದ್ದಾರೆ. ಈಗ ನಾನು ಒಂದು ಹಂತಕ್ಕೆ ಚೇತರಿಸಿಕೊಂಡಿದ್ದೇನೆ ಅದಕ್ಕೆ ಸೇವಾಧಾಮದ ಸಿಬ್ಬಂದಿ ವರ್ಗದವರ ಪರಿಶ್ರಮ ತುಂಬಾ ಇದೆ ಅವರಿಗೆ ತುಂಬು ಹೃದಯದ ಧನ್ಯವಾದಗಳು ಈ ಸಂಸ್ಥೆಯ ಸಂಸ್ಥಾಪಕರಾದ ವಿನಾಯಕ ಸರ್ ರವರಿಗೂ ಕೂಡ ನನ್ನ ತುಂಬು ಹೃದಯದ ಧನ್ಯವಾದಗಳು....

## ಸೇವಾನಿಧಿ ದಾನಿಗಳು

- ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀಮತಿ ದಿವ್ಯಾ ಪುರಂದರ್, ಬೆಂಗಳೂರು
- ಶ್ರೀ ಕೆ ಪುರಂದರ್ ರಾವ್, ನಾರ್ಯ
- ಶ್ರೀಮತಿ ಜಯಂತಿ ಪುರಂದರ್, ನಾರ್ಯ
- ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀ ಕೆ ರಾಘವೇಂದ್ರ ಶಾಸ್ತ್ರೀ, ಧರ್ಮಸ್ಥಳ
- ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
- ಡಾ ರಾಮಕೃಷ್ಣ ಭಟ್ ಜಿ. ಎನ್, ಕನ್ಯಾಡಿ
- ಶ್ರೀ ರಜತ್ ಕುಮಾರ್ ಜೆ. ಡಿ, ವೇಣೂರು
- ಶ್ರೀ ಅಖಿಲೇಶ್ ಎಸ್, ಪುತ್ತೂರು
- ಶ್ರೀ ಕೆ ಶ್ರೀಧರ್ ಕೆ. ವಿ, ಉಜಿರೆ
- ಶ್ರೀಸೂರ್ಯನಾರಾಯಣ ರಾವ್, ದೊಂಡೋಲೆ
- ಶ್ರೀ ಬಿ ಪುರಂದರ್, ನಾರ್ಯ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಮಧುಸೂದನ್,ಉಜಿರೆ
- ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಹೋಟೆಲ್ ಬಾಂಬೆ ಡೈನ್,ಉಜಿರೆ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ

## ಮಹನೀಯ ದಾನಿಗಳು

- ಶ್ರೀ ಮಹೇಶ್ ಟಿ.ಎಸ್, ಶಿವಮೊಗ್ಗ
- ಕು ಅಂಜನಾದೇವಿ ಬಿ, ಉಜಿರೆ
- ಶ್ರೀ ಕೀರ್ತೇಶ್, ಕಲ್ಲಾರೆ
- ಶ್ರೀ ಗುರುರಾಜ್, ಕಲ್ಮಂಜ
- ಶ್ರೀಮತಿ ಬಬಿತಾ, ಕನ್ಯಾಡಿ
- ಕು ವಿಖ್ಯಾತಿ ವೈ. ಆರ್, ಬಡಗಕಜೆಕಾರು
- ಶ್ರೀ ಕೆ. ಎಲ್ ಗೋಪಾಲಕೃಷ್ಣ, ಬೆಂಗಳೂರು
- ಶ್ರೀಮತಿ ಶ್ವೇತಾ ಜಿ. ಪೈ, ಬೆಂಗಳೂರು
- ಶ್ರೀ ತುಕಾರಾಮ್, ಬೆಂಗಳೂರು
- ಶ್ರೀ ಹರೀಶ್ ಗಂಭೀರ್, ಬೆಂಗಳೂರು
- ಶ್ರೀಮತಿ ಸುಷ್ಮಾ ಎನ್, ಬೆಂಗಳೂರು
- ಕು ರಕ್ಷಿತಾ ರಾವ್ ಎಲ್, ಜೋಡುಸ್ಥಾನ
- ಶ್ರೀ ತ್ರಿವಿಕ್ರಮ ಹೆಬ್ಬಾರ್, ಬೆಳ್ತಂಗಡಿ
- ಲಯನ್ ಶ್ರೀನಿವಾಸ್ ಪೂಜಾರಿ, ಮೆಲ್ಕಾರ್
- ಶ್ರೀ ನರೇಂದ್ರ ರೆಡ್ಡಿ, ಬೆಂಗಳೂರು
- ಶ್ರೀಮತಿ ಎಂ. ಪಿ ಪದ್ಮಲತಾ, ಮೂಡಿಗೆರೆ
- ಶ್ರೀ ಕೃಷ್ಣಮೂರ್ತಿ,ತುಮಕೂರು
- ಶ್ರೀ ನಿರಂಜನ್ ಕುಮಾರ್ ಬಿ, ಬೆಂಗಳೂರು

## ದೇಣಿಗೆ ನೀಡಿದಸಂಘ ಸಂಸ್ಥೆಗಳು

- ವಿಜಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್, ಗುರುವಾಯನಕೆರೆ
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ( ನಿ.), ಧರ್ಮಸ್ಥಳ
- ನಿಯೋ ಮೋಶನ್ ಅಸಿಸ್ಟೀವ್ ಡಿವೈಸ್, ಚೆನ್ನೈ
- ಮಂಗಳೂರು ರಿಫೈನರಿ ಅಂಡ್ ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್, ಮಂಗಳೂರು
- ರೋಟರಿ ಕ್ಲಬ್ ಆಫ್ ಮಂಗಳೂರು ಸೌತ್
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.),ಗುರುವಾಯನಕೆರೆ
- ಮಡಂತ್ಯಾರ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಮಡಂತ್ಯಾರ್
- ಬಂಗಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.),ಬಂಗಾಡಿ
- ರೋಟರಿ ಕ್ಲಬ್ ದೇರಳಕಟ್ಟೆ
- ರೋಟರಿ ಕ್ಲಬ್ ಮಂಗಳೂರು ಡೌನ್ ಟೌನ್
- ರೋಟರಿ ಕ್ಲಬ್ ಆಫ್ ಮಂಗಳೂರು ಸಿಟಿ

## ವಸ್ತುರೂಪದಲ್ಲಿ ದೇಣಿಗೆ

- ಅಮೃತ ಶಿಶು ನಿವಾಸ, ಬೆಂಗಳೂರು
- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀ ರೋಹಿತ್ ಎಂ ಪಿ, ಉಜಿರೆ

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಸೆಪ್ಟೆಂಬರ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು






ಶ್ರೀ ಭಾರ್ಗವ್ ,ಕುಮಟಾ

ಶ್ರೀ ಮಹೇಶ್ ಪೈಕ




ಶ್ರೀ ಬಾಬು, ಬೈಂದೂರು

## ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ಮಾಡುವಂತೆ ಮನವಿ





ಸೇವಾಭಾರತಿ ಸಂಸ್ಥೆಯು ಕಳೆದ 20 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. ಪ್ರಸಕ್ತ ವರ್ಷದಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ಮುಂಬರುವ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ. ನಮ್ಮ ಸಂಸ್ಥೆಯ ಕಟ್ಟಡದ ನಿರ್ಮಾಣಕ್ಕಾಗಿ ಒಟ್ಟು ಮೊತ್ತ ರೂ 3,05,72,580/-ಅಂದಾಜಿಸಲಾಗಿದ್ದು, ಇದರ ಮೊದಲ ಹಂತವಾಗಿ ನೆಲಮಹಡಿಗೆ 2 Mangalore Refinery and petrochemicals Limited (MRPL) ನಿಂದ ರೂಪಾಯಿ 42 ಲಕ್ಷದಷ್ಟು ಮಂಜೂರಾಗಿದ್ದು ಒಂದು ವರ್ಷದ ಅವಧಿಯೊಳಗೆ ನಿರ್ಮಾಣ ಮಾಡಬೇಕಾಗಿದೆ. ಆದರೆ ಅಡಿಪಾಯ ಹಾಗೂ ಬೇಸ್ಮೆಂಟ್ ನಲ್ಲಿ ಶೌಚಾಲಯ, ಒಂದು ಸೆಕ್ಯೂರಿಟಿ ರೂಮ್, ಸಂಪು ಹಾಗೂ ಪಾರ್ಕಿಂಗ್ ವ್ಯವಸ್ಥೆಗಳನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ ಒಟ್ಟು 60 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗಲಿದೆ. ಅಲ್ಲದೆ ಮಂಗಳೂರಿನ NMPA ಯ CSR ಅನುದಾನ (ರೂ. 25 ಲಕ್ಷ)ವು ಮಂಜೂರುಗೊಂಡಿರುವ ಪತ್ರ ಲಭ್ಯವಿದ್ದು ಮೊದಲ ಮಹಡಿಯ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. Mani and Minoo ಟ್ರಸ್ಟ್ ನಿಂದ ಸಹಕಾರ ದೊರಕಿದೆ. ಹಾಗೆ LIC of INDIA ಮತ್ತು ಬೆಂಗಳೂರಿನ BEL ಕಂಪನಿಗೆ CSR ನಿಧಿಗಾಗಿ ಮನವಿಯನ್ನು ಸಲ್ಲಿಸಲಾಗಿದೆ. ಪ್ರಸ್ತುತ ನೆಲಮಹಡಿ ಮತ್ತು ಒಂದನೇ ಮಹಡಿಗೆ ಸಹಕಾರದ ಭರವಸೆಯಿದ್ದು ಉಳಿದ ಎರಡು ಮಹಡಿಗಳಿಗೆ ಬೇರೆ ಬೇರೆ CSR ,ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ

**ಒಟ್ಟು ಮೊತ್ತ ರೂ. 3.05,72,580/- ಅಂದಾಜಿಸಲಾಗಿದ್ದು. ಇದರ ನೆಲಮಹಡಿಗೆ ಮಂಗಳೂರಿನ MRPL ರೂ. 42 ಲಕ್ಷದಷ್ಟು ನೀಡಲಿದೆ.**

ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ ( 12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ, ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD


237887292400920@cnrb

**Scan and Pay also**

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ಸೇವಾ ಸಂಗಮ



ಸೌತಡ್ಕದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ, ಸೇವಾಧಾಮದ **ಎಂಟನೇ ವರ್ಷದ ಪಾದಾರ್ಪಣೆಯ ಸಂದರ್ಭದಲ್ಲಿ** ಸೆಪ್ಟೆಂಬರ್ ತಿಂಗಳ 36ನೇ ಸೇವಾ ಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರವನ್ನು ಆಯೋಜಿಸಿದ್ದು ಬದುಕು ಬದಲಾದ 4 ಫಲಾನುಭವಿಗಳು ತಮ್ಮ ಅನುಭವವನ್ನು ವ್ಯಕ್ತಪಡಿಸಿದರು.. ಮತ್ತು ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆಯ ಪ್ರಯುಕ್ತ ಆಯೋಜಿಸಿದಂತಹ ರೀಲ್ಸ್ ಸ್ಪರ್ಧೆಯ ವಿಜೇತರ ಘೋಷಣೆಯನ್ನು ಮಾಡಲಾಯಿತು.. ಕಾರ್ಯಾಗಾರದಲ್ಲಿ ಒಟ್ಟು 73 ಮಂದಿ ಭಾಗವಹಿಸಿದ್ದರು.

# ಇಲಾಖೆಯಿಂದ ಕಾರ್ಮಿಕನಿಗೆ ಲಭ್ಯವಾದ ಪರಿಹಾರ



ಬೆಳ್ತಂಗಡಿ ತಾಲೂಕಿನ ಮುಂಡಾಜೆ ಗ್ರಾಮದ ಶ್ರೀ ಶ್ರೀನಿವಾಸ ನಾಯ್ಕ ರವರು 1 ಆಗಸ್ಟ್ 2023 ರಂದು ಕಟ್ಟಡದಿಂದ ಕೆಳಗೆ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿರುತ್ತಾರೆ. ಹನ್ನೊಂದು ತಿಂಗಳ ಕಾಲ ಹಾಸಿಗೆಯಲ್ಲಿ ಮಲಗಿ ದಿನವನ್ನು ಕಳೆದ ವ್ಯಕ್ತಿ. ನಂತರ 6 ಜೂನ್ 2024 ರಿಂದ 6 ಸೆಪ್ಟೆಂಬರ್ 2024 ರವರೆಗೆ ಸೌತಡ್ಕದ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಗಾಲಿಕುರ್ಚಿ -ಯಲ್ಲಿ ಕುಳಿತುಕೊಳ್ಳುವಷ್ಟು ಸಕ್ಷಮ ಹೊಂದಿರುತ್ತಾರೆ. ಇವರು ಬಿಎಂಎಸ್ ಸದಸ್ಯರಾಗಿದ್ದು ಬಿಎಂಎಸ್ ಬೆಳ್ತಂಗಡಿ ಕಛೇರಿಯ ಸಹಾಯದೊಂದಿಗೆ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸಿಗುವ ಪರಿಹಾರಕ್ಕೆ ಅರ್ಜಿ ಹಾಕಲು ಅನ್ಲೈನ್ ನಲ್ಲಿ ಪ್ರಯತ್ನಿಸಲಾಗಿತ್ತು. ಆದರೆ ಪೋರ್ಟಲ್ ಸಮಸ್ಯೆಯಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದ ಕಾರಣ ಈ ಬಗ್ಗೆ ನೇರವಾಗಿ ಕಾರ್ಮಿಕರ ಕಲ್ಯಾಣ ಮಂಡಳಿಗೆ ಅರ್ಜಿ ಸಲ್ಲಿಸಿ ಪೋರ್ಟಲ್ ನ ಸಮಸ್ಯೆಯಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗುತಿಲ್ಲ ಮತ್ತು ಇವರಿಗೆ ಪೆನ್ಶನ್ ಮತ್ತು ಪರಿಹಾರವನ್ನು ನೀಡುವಂತೆ ಪತ್ರ ಬರೆದು ಮನವಿ ಮಾಡಲಾಗಿತ್ತು. ಆದರೆ ಈ ಅರ್ಜಿಗೆ ಯಾವುದೇ ಸ್ಪಂದನೆ ಬಾರದೇ ಇದ್ದ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ರವರ ಸಹಾಯವನ್ನು ಪಡೆದುಕೊಂಡು ಅವರಿಂದ ಕಾರ್ಮಿಕ ಸಚಿವರಿಗೆ ಪತ್ರ ಬರೆದು ಕಾರ್ಮಿಕ ಸಚಿವರು ಕಾರ್ಮಿಕ ಕಲ್ಯಾಣ ಮಂಡಳಿಗೆ ಶಿಫಾರಸ್ಸು ಪತ್ರವನ್ನು ಕಳಿಸಿಕೊಟ್ಟರೂ ಅರ್ಜಿಯ ಸಂದರ್ಭದಲ್ಲಿ ನೀಡಿದ ಕಾರಣ ಸರಿಯಾದದ್ದು ಅಲ್ಲ ಎಂದು ಅರ್ಜಿಯನ್ನು ನಿರಾಕರಣೆ ಮಾಡಲಾಗಿತ್ತು ನಂತರ ಭಾರತೀಯ ಮಜ್ದೂರ್ ಸಂಘದ (BMS) ರಾಜ್ಯ ಕಾರ್ಯದರ್ಶಿ ಹಾಗೂ ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲ್ಯಾನ್ ಕಾನರ್ಪರವರ ಯೋಚನೆಯಂತೆ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಬೆಂಗಳೂರು ಕಾರ್ಮಿಕ ಮಂಡಳಿಯ ಮುಖ್ಯಕಾರ್ಯನಿರ್ವಣಾಧಿಕಾರಿ ಶ್ರೀಮತಿ ಭಾರತಿ ಅವರನ್ನು ಭೇಟಿ ಮಾಡಿ ಶ್ರೀನಿವಾಸ್ ನಾಯ್ಕ ರವರಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ಕಾರ್ಮಿಕರ ಭವಿಷ್ಯಕ್ಕಾಗಿ ಮಂಡಳಿಯಲ್ಲಿ ಪರಿಹಾರ ನೀಡುವಂತೆ ವಿನಂತಿಸಲಾಗಿತ್ತು. ಈ ಸಂದರ್ಭದಲ್ಲಿ ಸ್ಪಂದಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇದಕ್ಕೆ ಸಹಾಯ ಮಾಡುವೆನೆಂದು ತಿಳಿಸಿದ್ದರು. ಇದರ ಪ್ರಕ್ರಿಯೆ ಬಹಳ ತಡವಾಗಿದ್ದರೂ ನಂತರ ಶ್ರೀನಿವಾಸ್ ನಾಯ್ಕ ಅವರಿಗೆ ಒಂದು ಲಕ್ಷ ಅರವತ್ತೆರಡು ಸಾವಿರ ಪರಿಹಾರ ಮತ್ತು ತಿಂಗಳಿಗೆ 2000 ಪೆನ್ಶನ್ ಮಂಜೂರಾಗಿರುತ್ತದೆ. ಅನೇಕ ಪ್ರಯತ್ನದ ಸಲುವಾಗಿ ಶ್ರೀನಿವಾಸ್ ಅವರಿಗೆ ಈ ಪಿಂಚಣಿ ಲಭಿಸಿರುವುದು ಶ್ಲಾಘನೀಯ. ಪಿಂಚಣಿ ಪರಿಹಾರ ಸಿಗುವಲ್ಲಿ ಸೇವಾಭಾರತಿ ಟ್ರಸ್ಟಿ ಶ್ರೀ ಜಯರಾಜ್ ಸಾಲ್ಯಾನ್ ಕಾನರ್ಪ ರವರ ಕಾರ್ಯ ಅಭಿನಂದನಾರ್ಹ. ಸೇವಾಭಾರತಿ ಸಂಸ್ಥೆಯ ಪರವಾಗಿ ಇವರಿಗೆ ತುಂಬು ಹೃದಯದ ಧನ್ಯವಾದಗಳು

# ಸೆಪ್ಟೆಂಬರ್ ತಿಂಗಳ ಸೇವಾ ಕಾರ್ಯಗಳು:

| | |
|---|---|
| 1.ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | - 29 |
| 2.ಹೊಸ ಗುರುತಿಸುವಿಕೆ | - 4 |
| 3.ನಿಯೋ ಮೋಶನ್ ವಿಥ್ ಕಾರ್ಟ್ ವಿತರಣೆ | - 2 |
| 4. ಪುನಶ್ಚೇತನವನ್ನು ಪಡೆದುಕೊಂಡವರು | - 8 |
| 5. ಗಾಲಿಕುರ್ಚಿ ವಿತರಣೆ | - 12 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**C A ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್, ಉಡುಪಿ**



**ಶ್ರೀಮತಿ ಜೋಯ್ಸ್ ಫಿರೇರ,**
ಬೆಂಗಳೂರು



**ಶ್ರೀಮತಿ ಬಬಿತಾ,**
ಕನ್ಯಾಡಿ



**ಶ್ರೀ ಕೀರ್ತೇಶ್**
ಕಲ್ಲಾರೆ



**ಮಾಸ್ಟರ್। ಶಿವಾಂಶ್ ಬಿ. ಕೆ,**
ಬೆರ್ಕೆ



**ಮಾಸ್ಟರ್। ತ್ರಿಯಾಂಶ್,**
ಬೆಳಾಲು



**ಶ್ರೀ ಸಂತೋಷ್ ಶೆಟ್ಟಿ,**
ಶಿರಸಿ



**ಮಾಸ್ಟರ್। ವಿಹಾಗ್,**
**ಬೆಳ್ತಂಗಡಿ**




**ಕು। ವಿಖ್ಯಾತಿ ವೈ ಆರ್,**
ಮಡಂತ್ಯಾರ್



**ಶ್ರೀ ಮಹೇಶ್ ಎಚ್ ಸಿ,**
ಚಿಕ್ಕಮಗಳೂರು



**ಕು ರಕ್ಷಿತಾ,**
ಆಸ್ಟ್ರೇಲಿಯಾ



**ಬೇಬಿ। ಶ್ರೀ ಬಿಲ್ವನಿ ,**
ಉಜಿರೆ



**ಕು। ಅಂಜನಾದೇವಿ,**
ಉಜಿರೆ



## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಫಲಾನುಭವಿಗಳಿಗೆ ವೈದ್ಯರಿಂದ ಸಮಾಲೋಚನೆ

ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ಫಲಾನುಭವಿಗಳಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಸೆಪ್ಟೆಂಬರ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರು ಡಾ।ವೈಶಾಕ್ ಬಿ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ಫಲಾನುಭವಿಗಳನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 6 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

### ಬೆನ್ನುಹುರಿಯ ಗಾಯದ ನಂತರ ಕರುಳಿನ ನಿರ್ವಹಣೆ ಹೇಗೆ???

ಸ್ಥಿರವಾದ ಕರುಳಿನ ಚಲನೆಯನ್ನು ಸಾಧಿಸಲು, ಅಪಘಾತಗಳನ್ನು ತಡೆಗಟ್ಟಲು ಮತ್ತು ಜೀವನದ ಗುಣಮಟ್ಟವನ್ನು ಕಾಪಾಡಿಕೊಳ್ಳಲು ನಿಯಮಿತ ದಿನಚರಿಯನ್ನು ರಚಿಸುವುದನ್ನು ಒಳಗೊಂಡಿರುತ್ತದೆ. ಯಶಸ್ವಿ ಕಾರ್ಯಕ್ರಮದ ಪ್ರಮುಖ ಅಂಶಗಳಲ್ಲಿ ಹೆಚ್ಚಿನ ಫೈಬರ್ ಆಹಾರ, ಸಾಕಷ್ಟು ದ್ರವ ಸೇವನೆ, ನಿಗದಿತ ವ್ಯಾಯಾಮ ಮತ್ತು ಡಿಜಿಟಲ್ ರೆಕ್ಟಲ್ ಸ್ಟಿಮ್ಯುಲೇಶನ್, ಸಪೊಸಿಟರಿಗಳು ಮತ್ತು ಟ್ರಾನ್ಸಾನಲ್ ನೀರಾವರಿಯಂತಹ ಕರುಳಿನ ಉದ್ದೀಪನ ತಂತ್ರಗಳು ಸೇರಿವೆ.

ಆಹಾರ ಮತ್ತು ಜೀವನಶೈಲಿ ಹೊಂದಾಣಿಕೆಗಳು

ಹೈ-ಫೈಬರ್ ಆಹಾರ: ಮಲಕ್ಕೆ ಬೃಹತ್ ಪ್ರಮಾಣದಲ್ಲಿ ಸೇರಿಸಲು ಮತ್ತು ನಿಯಮಿತ ಕರುಳಿನ ಚಲನೆಯನ್ನು ಉತ್ತೇಜಿಸಲು ಸಾಕಷ್ಟು ಹಣ್ಣುಗಳು, ತರಕಾರಿಗಳು ಮತ್ತು ಇತರ ಹೆಚ್ಚಿನ ಫೈಬರ್ ಆಹಾರಗಳನ್ನು ಸೇವಿಸಿ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10000/ - ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಆತ್ಮಸ್ಥೈರ್ಯದಿಂದ ದಿವ್ಯಾಂಗತೆಯನ್ನು ಮೆಟ್ಟಿನಿಂತ ಡಾ. ಮುರಳೀಧರ್ ನ್ಯಾಕ್ ವರ್ಕಾಡಿಯವರ ಯಶೋಗಾಥೆ:




ಡಾ. ಮುರಳೀಧರ್ ನ್ಯಾಕ್ ವರ್ಕಾಡಿ ರವರು ಮೂಲತಃ ಮಂಜೇಶ್ವರ ತಾಲೂಕಿನ ವರ್ಕಾಡಿಯ ನಿವಾಸಿಯಾಗಿದ್ದು, 1954 ಜೂನ್ 14 ರಂದು ದಿ. ಕಾಪ್ರಿ ದಿ. ಸೀತಾರಾಮ ನ್ಯಾಕ್ ಮತ್ತು ಶ್ರೀಮತಿ ಲಲಿತ ನ್ಯಾಕ್ ದಂಪತಿಗಳ ಪುತ್ರರಾಗಿ ಜನಿಸಿದರು. ಕಳೆಯೂರಿನಲ್ಲಿ ಸೈಂಟ್ ಜೋಸೆಫ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾಡಿದರು. ಕೊಡ್ಲಮೊಗರು ಶ್ರೀ ವಾಣೀ ವಿಜಯದಲ್ಲಿ ಹೈಸ್ಕೂಲ್ ಶಿಕ್ಷಣ, ಮಂಗಳೂರು ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ ಪದವಿ ಪೂರ್ವ ಹಾಗೇ ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಬಿ.ಎಸ್‌ಸಿ. ಪದವಿ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಹಿಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು. ಓದು ಮುಗಿಸಿ ಒಂದೊಳ್ಳೆ ಕೆಲಸವನ್ನು ಮಾಡುತ್ತ ಜೀವನವನ್ನು ಸಾಗಿಸಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದ ಮುರಳೀಧರ್ ರವರ ಜೀವನದಲ್ಲಿ ಎನಿಸಲಾಗದ ಕಹಿ ಘಟನೆ ಒಂದು ನಡೆದುಹೋಯಿತು.. 1980 ನವೆಂಬರ್ 7 ರಂದು ಕುಟುಂಬಸ್ಥರ ಮನೆಯಲ್ಲಿ ತೆಂಗಿನ ಮರಕ್ಕೆ ಹತ್ತಿ ಅಲ್ಲಿಂದ ಆಯಾ ತಪ್ಪಿ ಕೆಳಕ್ಕೆ ಬಿದ್ದಾಗ ಬೆನ್ನುಹುರಿ ಅಪಘಾತಕ್ಕೆ ಒಳಗಾದರು. ತಕ್ಷಣ ಇವರನ್ನು ಮಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು.. 75 ದಿನಗಳ ಚಿಕಿತ್ಸೆಯನ್ನು ಡಾ. ಶಾಂತಾರಾಮ್ ಶೆಟ್ಟಿಯವರಿಂದ ಪಡೆದುಕೊಂಡರು. ನನ್ನಿಂದ ಏನು ಸಾಧ್ಯವಿಲ್ಲ ನನ್ನ ಜೀವನವೇ ಮುಗಿದು ಹೋಯಿತು ಅನ್ನುವಷ್ಟು ಕುಸಿದು ಬಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದ ನಂತರ 2 ವರ್ಷಗಳ ಕಾಲ ಮನೆಯಲ್ಲಿಯೇ ಮಲಗಿ ಜೀವನವನ್ನು ಕಳೆದರು. ನಂತರ ಕೋಟೆಕಲ್ ಆರ್ಯ-- ವೈದ್ಯ ಶಾಲದಲ್ಲಿ ಆಯುರ್ವೇದಿಕ್ ಚಿಕಿತ್ಸೆಯನ್ನು ಪಡೆದುಕೊಂಡು. ಸ್ವಲ್ಪ ಸ್ವಲ್ಪವಾಗಿ ಚೇತರಿಕೊಳ್ಳುತ್ತಾ ಜೀವನದಲ್ಲಿ ಆತ್ಮವಿಶ್ವಾಸವನ್ನು ಕಂಡುಕೊಂಡರು. ಬದುಕಬಲ್ಲೇನು ನಾನು ಏನನ್ನು ಸಾಧಿಸಬಲ್ಲೇನು ಎನ್ನುವ ಆತ್ಮವಿಶ್ವಾಸ ಅವರ ಮನಸಿನಲ್ಲಿ ಮೂಡಿತು. ತನ್ನ ಕಲಿಕೆಯನ್ನು ಇಲ್ಲಿಗೆ ನಿಲ್ಲಿಸಬಾರದು ಎಂಬ ಹಂಬಲದಿಂದ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಪಿ.ಹೆಚ್.ಡಿ ಪಡೆದುಕೊಂಡರು. ಓದು ಮುಗಿದ ಬಳಿಕ ಮಂಗಳೂರಿನ ಮಹಾಬಲೇಶ್ವರ ಟ್ರಾನ್ಸ್ಪೋರ್ಟ್ ನಲ್ಲಿ ವ್ಯವಸ್ಥಾಪಕರಾಗಿ, ಬ್ರಹ್ಮಾವರ ಎಸ್.ಎಂ.ಎಸ್. ಕಾಲೇಜಿನಲ್ಲಿ, ಉಡುಪಿ ಎಂ.ಜಿ.ಎಂ ಕಾಲೇಜಿನಲ್ಲಿ, ಬೆಸೆಂಟ್ ಸಂಧ್ಯಾ ಕಾಲೇಜಿನಲ್ಲಿ, ಸೈಂಟ್ ಅಲೋಸಿಯಸ್ ಸಂಧ್ಯಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಂಗಳೂರಿನಲ್ಲಿ ಹಿಂದಿ ವಿಭಾಗದ ಮುಖ್ಯಸ್ಥರಾಗಿ 32 ವರ್ಷಗಳ ಸೇವೆಯನ್ನು ಸಲ್ಲಿಸಿದ ಹೆಗ್ಗಳಿಕೆ ಇವರದಾಗಿದೆ.. ಹಾಗೇ ಶೈಕ್ಷಣಿಕ ಕ್ಷೇತ್ರದಲ್ಲಿ ಮೂರು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಳಿ ಮತ್ತು ಪರೀಕ್ಷಾ ಮಂಡಳಿ ಸದಸ್ಯರಾಗಿ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಚೆನ್ನೈ, ಇದರ ಪಿ.ಹೆಚ್.ಡಿ. ಮಾರ್ಗದರ್ಶಕರಾಗಿ ಹಾಗೂ ಪಿ.ಹೆಚ್.ಡಿ. ಪರೀಕ್ಷಕರಾಗಿ ಮತ್ತು ಮಂಗಳೂರು ವಿ.ವಿ. ಸ್ನಾತಕೋತ್ತರ ವಿಭಾಗದ ಸಂದರ್ಶಕ ಉಪನ್ಯಾಸಕರಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.

ನಂತರ 34ನೇ ವರ್ಷದಲ್ಲಿ ಶ್ರೀಮತಿ ಪ್ರೇಮ ಎಂ. ನ್ಯಾಕ್ ರವರ ಜೊತೆ ವೈವಾಹಿಕ ಜೀವನಕ್ಕೆ ಕಾಲಿಟ್ಟು ಪುತ್ರನಿಗೂ ಜನ್ಮವಿತ್ತರು. ಸಂತೋಷದಿಂದ ಜೀವನವನ್ನು ಸಾಗಿಸುತ್ತಿದ್ದ ಮುರಳೀಧರ್ ರವರು ಸರಕಾರೀ ಆಡಳಿತ ಮಂಡಳಿ ಸದಸ್ಯತನದಲ್ಲಿ ಕಾರ್ಯನಿರ್ವಹಿಸಿ ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ 6 ವರ್ಷ ಸೇವೆ, ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಶಕ್ತಿಕರಣ ಸಚಿವಾಲಯದ ನ್ಯಾಶನಲ್ ಟ್ರಸ್ಟ್ ಸಮಿತಿ ಸದಸ್ಯರಾಗಿ, ಕರ್ನಾಟಕ ಸರ್ಕಾರ ಕಾಲೇಜು ಶಿಕ್ಷಣ ಇಲಾಖೆ ನೇಮಕಾತಿ ಸಮಿತಿ ಸದಸ್ಯರಾಗಿ, ಕಾರ್ಪೊರೇಶನ್ ಬ್ಯಾಂಕ್ ನೇಮಕಾತಿ ಸಮಿತಿ ಸದಸ್ಯ, ಕರ್ನಾಟಕ ಸರ್ಕಾರದ ಗ್ರಂಥಾಲಯದ ಸಾರ್ವಜನಿಕ ಪುಸ್ತಕ ಆಯ್ಕೆ ಸಮಿತಿ ಸದಸ್ಯ ಮತ್ತು ವೆನ್‌ಲಾಕ್ ಆಸ್ಪತ್ರೆಯ ಡಿ.ಡಿ.ಆರ್.ಸಿ. ನೇಮಕಾತಿ ಸಮಿತಿ ಸದಸ್ಯ, ಕರ್ನಾಟಕ ಸರ್ಕಾರದ ಆಧಾರ ಯೋಜನೆಯ ಜಿಲ್ಲಾ ಸಮಿತಿ ಸದಸ್ಯ, ಯು.ಜಿ.ಸಿ.ಯ ರಾಷ್ಟ್ರೀಯ ಮೌಲ್ಯಾಂಕನ ಹಾಗೂ ಪ್ರತ್ಯಯನ ಪರಿಷತ್ ನ್ಯಾಕ್ (NAAC) ಪೀರ್ ಸಮಿತಿ ಸದಸ್ಯ, ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ರಾಷ್ಟ್ರೀಯ ನಿರ್ದೇಶನ ಸಮಿತಿ ಸದಸ್ಯರಾಗಿ (2018-2021) ರ ತನಕ ಕರ್ತವ್ಯವನ್ನು ನಿರ್ವಹಿಸಿದರು..

ಇಷ್ಟೇ ಅಲ್ಲದೇ ಸಾಮಾಜಿಕ ಸಂಘ-ಸಂಸ್ಥೆಗಳ ಜವಾಬ್ದಾರಿಯಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಹಿಂದಿ ಅಧ್ಯಾಪಕ ಸಂಘದ ಸ್ಥಾಪಕ ಕಾರ್ಯದರ್ಶಿ, ಚೈತನ್ಯ ವಿವಿಧೋದ್ದೇಶ ಸಹಕಾರೀ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಚೈತನ್ಯ ವೃತ್ತಿ ತರಬೇತಿ ಕೇಂದ್ರದ ನಿರ್ದೇಶಕ, ಅಖಿಲ ಭಾರತೀಯ ವಿಶೇಷ ಚೇತನರ ರಾಷ್ಟ್ರೀಯ ಸಂಘ ಸಕ್ಷಮದ ದಕ ಜಿಲ್ಲಾ ಅಧ್ಯಕ್ಷರಾಗಿ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಮಂಗಳೂರಿನ ಉಪಾಧ್ಯಕ್ಷರಾಗಿ, ವಿಶೇಷ ಚೇತನರ ಮತ್ತು ಪಾಲಕರ ಸಂಘ "ಆಶಾ ಜ್ಯೋತಿ"ಯ ಕಾರ್ಯದರ್ಶಿಯಾಗಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಪ್ರಮುಖನಾಗಿ 15 ವರ್ಷ ಸೇವೆ ಸಲ್ಲಿಸಿ ಜಿಲ್ಲಾ ವಿಶೇಷ ಚೇತನರ ಸಂಘದ ಸ್ಥಾಪಕ ಕಾರ್ಯದರ್ಶಿಯಾಗಿ ಪ್ರಸಕ್ತವಾಗಿ 26 ವರ್ಷದಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದರ ಜೊತೆ ಜೊತೆಗೆ ಖಾಸಗಿ ಆಡಳಿತ ಮಂಡಳಿಗಳ ಜವಾಬ್ದಾರಿಯಲ್ಲಿ ಮಂಗಳೂರಿನ ಮಿಫ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಮತ್ತು ಮಂಗಳೂರಿನ ಶಕ್ತಿ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತ ಬಂದಿದ್ದಾರೆ..

ಇದರ ಜೊತೆಗೆ ಬರೆಯುವ ಮತ್ತು ಓದುವ ಹವ್ಯಾಸವನ್ನು ಇಟ್ಟುಕೊಂಡಿದ್ದ ಇವರು 10 ಪುಸ್ತಕಗಳು ಮತ್ತು 20 ಲೇಖನಗಳನ್ನು ಪ್ರಕಟಣೆ ಮಾಡಿದ್ದಾರೆ. ಮಂಗಳೂರು ಆಕಾಶವಾಣಿ, ರೇಡಿಯೋ, ಸಾರಂಗಗಳಲ್ಲಿ ಕಾರ್ಯಕ್ರಮ ಪ್ರಸಾರ ಮಾಡುತ್ತ ಆಮಂತ್ರಿತ ಭಾಷಣಗಳನ್ನು 500ಕ್ಕಿಂತಲೂ ಹೆಚ್ಚು ನಡೆಸಿಕೊಟ್ಟಿದ್ದಾರೆ.. ಇವರ ಸೇವೆ ಮತ್ತು ಕೆಲಸವನ್ನು ಗುರುತಿಸಿ ಅತ್ಯುತ್ತಮ ಸಮಾಜ ಸೇವಾ ಕಾರ್ಯಕರ್ತ ಪ್ರಶಸ್ತಿ ,ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ತುಳುನಾಡು ರಕ್ಷಣಾ ವೇದಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. ಬಹರೀನ್ ಕನ್ನಡ ಸಂಘ, ಬಹರೀನ್ ಬಂಟರ ಸಂಘ ಹೀಗೆ ಹಲವಾರು ಸನ್ಮಾನ ಮತ್ತು ಪ್ರಶಸ್ತಿಗಳು ಲಭಿಸಿದೆ.. ಇನ್ನಷ್ಟು ವಿಶೇಷ ಚೇತನರ ಕ್ಷೇತ್ರದಲ್ಲಿ ಸೇವೆಯನ್ನು ಮಾಡುವ ಅವಕಾಶ ಇವರದಾಗಲಿ ಎಂಬುದು ನಮ್ಮೆಲ್ಲರ ಆಶಯ..